11. ಬೆಳಗಾಂ ಜಿಲ್ಲೆಯ ಐದು ತಾಲ್ಲೂಕುಗಳನ್ನು ದ್ವಿತಳಿ ಬಿತ್ತನೆ ಪ್ರದೇಶವೆಂದು ಗುರುತಿಸಿ ಉಚಿತ ಸೋಂಕುನಿವಾರಣೆ ಸೌಲಭ್ಯ ಒದಗಿಸಿ ಈ ಪ್ರದೇಶದಲ್ಲಿ ಬೆಳೆದು ಬಿತ್ತನೆಗೆ ಯೋಗ್ಯವಾದ ಎಲ್ಲಾ ಗೂಡುಗಳಿಗೆ ಬಿತ್ತನೆ ದರ ಒದಗಿಸಲಾಗುತ್ತಿದೆ.

ಬೈಲಹೊಂಗಲ ತಾಲ್ಲೂಕಿನ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು

1114 (1277) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕೊಪ್ಪ ಹಾಗೂ ಬೈಲಹೊಂಗಲ ತಾಲ್ಲೂಕಿನ ಮಾಸ್ತಮರ್ಡಿ ಗ್ರಾಮಗಳಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಈ ವರ್ಷದಲ್ಲಿ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು ಇನ್ನೂ ನಿರ್ಣಯವನ್ನೂ ಕೈಗೊಂಡಿರುವುದಿಲ್ಲ.

ಹಜ್ ಯಾತ್ರೆ ಕುರಿತು

1115 (1278) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಣ್ಣಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಿಂದ ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಜನರನ್ನು ಹಜ್‌ಯಾತ್ರೆಗೆ ಕಳುಹಿಸಿಕೊಡಲಾಗಿತ್ತು ?

ಆ) ಹಜ್‌ಯಾತ್ರಿಕರಿಗೆ ಯಾವಯಾವ ಸೌಕರ್ಯಗಳನ್ನು ಒದಗಿಸಲಾಗಿತ್ತು ?

ಇ) ಅವರಿಗೆ ಸೌಕರ್ಯ ಒದಗಿಸಲು ಸರ್ಕಾರ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು) :

ಅ) 2002 ನೇ ಸಾಲಿನಲ್ಲಿ : 4076

2003 ನೇ ಸಾಲಿನಲ್ಲಿ : 3627

ಆ) ಸರ್ಕಾರವು ಈ ಕೆಳಕಂಡ ಸೌಲಭ್ಯಗಳನ್ನು ಹಜ್ ಯಾತ್ರಿಕರಿಗೆ ನೀಡಲಾಗುತ್ತಿದೆ.

ಅ) ಹಜ್ ಯಾತ್ರಿಕರಿಗೆ ಅರ್ಜಿಗಳು ಉಚಿತವಾಗಿ ನೀಡುವುದು.

ಆ) ಉಚಿತ ಚುಚ್ಚುಮದ್ದು ಹಾಗೂ ತರಬೇತಿ ನೀಡಲಾಗುವುದು.

ಇ) ಹಜ್ ಯಾತ್ರಿಕರು ವಿಮಾನ ಮೂಲಕ ಹಜ್‌ಯಾತ್ರೆ ಪ್ರಾರಂಭಿಸುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಹಜ್ ಕ್ಯಾಂಪ್‌ಗಳನ್ನು ಏರ್ಪಡಿಸುವುದು. ಈ ಕ್ಯಾಂಪ್‌ಗಳಲ್ಲಿ ಹಜ್ ಯಾತ್ರಿಕರು 2 ದಿವಸ ಮುಂಚಿತವಾಗಿ ಬಂದುಳಿಯಲು ಉಚಿತ ವಸತಿ, ಊಟ ಮತ್ತು ಹಜ್ ಕ್ಯಾಂಪ್‌ನಿಂದ ವಿಮಾನ ನಿಲ್ದಾಣಕ್ಕೆ ವಾಹನ ಸೌಕರ್ಯವನ್ನು ಕಲ್ಪಿಸಲಾಗುವುದು. ಇದಲ್ಲದೇ ಹಜ್ ಕ್ಯಾಂಪ್‌ನಲ್ಲಿಯೇ ಇಮಿಗ್ರೇಷನ್ ಚೆಕ್, ಕಸ್ಟಂ ಕ್ಲಿಯರೆನ್ಸ್ ಹಾಗೂ ವಿದೇಶಿ ವಿನಿಮಯ ವಿತರಣೆಗೆ ಕ್ರಮಕೈಗೊಳ್ಳಲಾಗುತ್ತಿದೆ.